# <u>ಕಾರ್ಮಿಕ ನ್ಯಾಯಾಲಯ, ಮೈಸೂರು.</u>

## <u>**Ref**:16/2025</u>

ಎಂ.ಡಬ್ಲ್ಯೂ– 1

**<u>ದಿನಾಂಕ 04.05.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು</u>**

**<u>ಪಾಟೀ ಸವಾಲುಃ1 ನೇ ಪಕ್ಷಗಾರರ ಪರ ಶ್ರೀ.ಎಲ್.ಎಂ.ಪಿ. ವಕೀಲರಿಂದಃ</u>**

ನಾನು 2 ನೇ ಪಕ್ಷಗಾರರ ಸಂಸ್ಥೆಯಲ್ಲಿ ಕಳೆದ 18 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. 1 ನೇ ಪಕ್ಷಗಾರರು ನಮ್ಮ ಸಂಸ್ಥೆಯಲ್ಲಿ ಯಾವ ಕೆಲಸಕ್ಕೆ ಸೇರಿಕೊಂಡಿದ್ದರು ಎಂದು ನನಗೆ ನೆನಪು ಇರುವುದಿಲ್ಲ. ನಿ.ಎಂ.1 ರ ಪ್ರಕಾರ 1 ನೇ ಪಕ್ಷಗಾರರನ್ನು 01.04.2014 ರಂದು ಕೆಲಸಕ್ಕೆ ಸೇರಿಕೊಂಡಿರುವುದಾಗಿ ಉಲ್ಲೇಖ ಮಾಡಿರುತ್ತೇವೆ ಎಂದರೆ ಸರಿ. ಆ ಸಂದರ್ಭದಲ್ಲಿ 1 ನೇ ಪಕ್ಷಗಾರರಿಗೆ ನೇಮಕಾತಿ ಪತ್ರವನ್ನು ಕೊಟ್ಟಿದ್ದೇವು. ಸದರಿ ನೇಮಕಾತಿ ಪತ್ರವನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸಲು ತೊಂದರೆ ಇಲ್ಲ ಎಂದರೆ ಸಾಕ್ಷಿ ಅದರ ಅವಶ್ಯಕತೆ ಇಲ್ಲ ಕಾರಣ ನೇಮಕಾತಿ ಪತ್ರಕ್ಕೆ ಸೇರ್ಪಡೆಯನ್ನು ಕೊಟ್ಟಿರುತ್ತೇವೆ ಎನ್ನುತ್ತಾರೆ. ಸದರಿ ಸೇರ್ಪಡೆಯಲ್ಲಿ ಹೆಚ್ಚುವರಿ ಷರತ್ತುಗಳನ್ನು ಸೇರ್ಪಡೆ ಮಾಡಿರುತ್ತೇವೆ. ಅವರ ಸೇವಾ ಷರತ್ತುಗಳ ಬದಲಾವಣೆ ಮಾಡಿ ಅವರಿಗೆ ಸೇರ್ಪಡೆಯನ್ನು ಕೊಟ್ಟಿರುತ್ತೇವೆ ಎಂದರೆ ಸರಿ. ಸದರಿ ಸೇರ್ಪಡೆಯಲ್ಲಿ ಸೇವಾ ಷರತ್ತುಗಳು ಏನೇನು ಬದಲಾವಣೆ ಮಾಡಿರುತ್ತೀರ ಎಂದರೆ ಸಾಕ್ಷಿ ಅದರ ಅವಶ್ಯಕತೆ ಇರುವುದಿಲ್ಲ ಎನ್ನುತ್ತಾರೆ. 1 ನೇ ಪಕ್ಷಗಾರರ ಸಂಬಳದಲ್ಲಿ ಬದಲಾವಣೆ ಉಂಟಾಗಿರುತ್ತದೆ. ಸಾಕ್ಷಿ ಮುಂದುವರೆದು ಸಂಬಳ ಹೆಚ್ಚಾಗಿರುತ್ತದೆ ಎನ್ನುತ್ತಾರೆ.

ಸದರಿ ಸೇರ್ಪಡೆಯಲ್ಲಿ ಕಾರ್ಮಿಕರು ಮತ್ತು ಮಾಲೀಕರು ಇ.ಪಿ.ಎಫ್. ನ ವಂತಿಕೆಯಲ್ಲಿ ಬದಲಾವಣೆಗಳು ಉಂಟಾಗಿರುತ್ತವೆ. ಸಾಕ್ಷಿ ಮುಂದುವರೆದು ಅದು ಹೆಚ್ಚಾಗಿರುತ್ತದೆ ಎನ್ನುತ್ತಾರೆ. ನಿ.ಎಂ.1 ರ ಪ್ರಕಾರ ಹಿಂದೆ ನೀಡಿದ್ದ ಸೇವಾ ಷರತ್ತುಗಳನ್ನು Supercede ಮಾಡಿ ಸದರಿ ನೇಮಕಾತಿ ಪತ್ರವನ್ನು ನೀಡಿರುತ್ತೇವೆ ಎಂದರೆ ಹೌದು.

ಅದೇ ರೀತಿ ಸದರಿ ಸೇರ್ಪಡೆಯಲ್ಲಿ ಪಾಳಿಯ ಕೆಲಸದ ಅವಧಿಯಲ್ಲಿ ಬದಲಾವಣೆಗಳನ್ನು ತಂದಿರುತ್ತೀರ ಎಂದರೆ ಸಾಕ್ಷಿ Factories Act ನಿಯಮಗಳ ಪ್ರಕಾರ ಮಾಡಿರುತ್ತೇವೆ ಎನ್ನುತ್ತಾರೆ. ನೇಮಕಾತಿ ಪತ್ರದಲ್ಲಿ 1 ನೇ ಪಕ್ಷಗಾರರ ಪರೀಕ್ಷಣಾ ಅವಧಿ (probationary period) ಮುಕ್ತಾಯಗೊಂಡಿರುತ್ತದೆ ಎಂದು ತಿಳಿಸಿದ್ದು ಅದರ ಬಗ್ಗೆ 1 ನೇ ಪಕ್ಷಗಾರರಿಗೆ confirmation letter ನೀಡಿರುತ್ತೀರ ಎಂದರೆ ನನಗೆ ನೆನಪಿಲ್ಲ ಎನ್ನುತ್ತಾರೆ.

ಎಂ.ಡಬ್ಲ್ಯೂ-1 ರ ದಾಖಲೆಯಲ್ಲಿ clause-6 ರಲ್ಲಿ ಪಾಳಿಯ ಕೆಲಸದ ಅವಧಿಯ ಬಗ್ಗೆ ತಿಳಿಸಿದ್ದು ಹಿಂದಿನ ನೇಮಕಾತಿ ಪತ್ರದಲ್ಲಿ ಅದರ ಬಗ್ಗೆ ಏನಾದರು ಷರತ್ತುಗಳು ಇದ್ದವಾ ಎಂದರೆ ನನಗೆ ನೆನಪಿಲ್ಲ ಎನ್ನುತ್ತಾರೆ. ನಿ.ಡಬ್ಲ್ಯೂ-1 ರ ಪ್ರಕಾರ 1 ನೇ ಪಕ್ಷಗಾರರ ತಿರುಪತಿ ವಿಭಾಗಕ್ಕೆ ವರ್ಗಾವಣೆ ಮಾಡಿದ್ದು ಸದರಿ ದಾಖಲೆಯ ಯಾವ ನಿಯಮದ ಪ್ರಕಾರ ಆ ರೀತಿ ವರ್ಗಾವಣೆ ಮಾಡಿರುತ್ತೀರ ಎಂದರೆ ಸಾಕ್ಷಿ ನಿಯಮ-4 ರ ಪ್ರಕಾರ ಮಾಡಿರುತ್ತೇವೆ ಎನ್ನುತ್ತಾರೆ. ತಿರುಪತಿ ಘಟಕವು division or department ವ್ಯಾಪ್ತಿಯಲ್ಲಿ ಬರುತ್ತದೆ ಎಂದರೆ division ವ್ಯಾಪ್ತಿಯಲ್ಲಿ ಬರುತ್ತದೆ ಎನ್ನುತ್ತಾರೆ. ಹಿಂದಿನ ನೇಮಕಾತಿ ಪತ್ರದಲ್ಲಿ ಇದರ ಬಗ್ಗೆ ಉಲ್ಲೇಖ ಇರಲಿಲ್ಲ ಎಂದರೆ ನನಗೆ ನೆನಪಿಲ್ಲ. ನಿ.ಎಂ.1 ರ ದಾಖಲೆಯಲ್ಲಿ ನೇಮಕಾತಿ ಪತ್ರ ಹಾಗೂ ಸ್ಥಾಯಿ ಆದೇಶದಲ್ಲಿ ಏನಾದರು ವ್ಯತ್ಯಾಸಗಳು ಇದ್ದರೆ ದೃಢೀಕೃತ ಸ್ಥಾಯಿ ಆದೇಶವು ಪ್ರಚಲಿತದಲ್ಲಿ ಇರುತ್ತದೆ ಎಂದರೆ ಹೌದು. ನಮ್ಮ ಸಂಸ್ಥೆಯ ಸ್ಥಾಯಿ ಆದೇಶ ಯಾವಾಗ ದೃಢೀಕೃತ ಆಗಿರುತ್ತದೆ ಎಂದು ನಮಗೆ ಹೇಳಲು ಆಗುವುದಿಲ್ಲ. ಸದರಿ ದೃಢೀಕೃತ ಆದೇಶದಲ್ಲಿ ಕಾರ್ಮಿಕರನ್ನು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ವರ್ಗಾವಣೆ ಮಾಡಬಹುದು ಎಂದು ಉಲ್ಲೇಖ ಇರುತದೆ ಎಂದರೆ ನನಗೆ ನೆನಪಿಲ್ಲ.

ನಮ್ಮ ಸಂಸ್ಥೆಯ ದೃಢೀಕೃತ ಸ್ಥಾಯಿ ಆದೇಶವನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸಿರುವ ದಾಖಲೆಗಳಲ್ಲಿ ಹಾಜರು ಮಾಡಿರುತ್ತೀರ ಎಂದರೆ ಅದರ ಅವಶ್ಯಕತೆ ಇರುವುದಿಲ್ಲ ಎನ್ನುತ್ತಾರೆ.

**ಈ ಹಂತದಲ್ಲಿ 1 ನೇ ಪಕ್ಷಗಾರರ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಿದೆ.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ, ತಿಳಿಸಿ, ಹೇಳಿದಾಗ, ಅವರು ಅದು ಸರಿ ಇದೆ ಎಂದು ಒಪ್ಪಿದ್ದಾರೆ.)

**ಅಧ್ಯಕ್ಷಾಧಿಕಾರಿಗಳು,**
**ಕಾರ್ಮಿಕ ನ್ಯಾಯಾಲಯ, ಮೈಸೂರು**